# ಕರ್ನಾಟಕ ಅರಣ್ಯ ಇಲಾಖೆ

ಸಂಖ್ಯೆ: ಎ7/ಎಲ್‌ಎನ್‌ಡಿ/ಎಫ್‌ಸಿ/Transline/ಬಿಜಿಎಂ/ಸಿಆರ್– 11/19–20/22–23

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ,
ಬೆಳಗಾವಿ ವೃತ್ತ, ಬೆಳಗಾವಿ
ದಿನಾಂಕ: –10–2022.

ಇವರಿಗೆ,

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು,
(ಅರಣ್ಯ ಸಂರಕ್ಷಣೆ)
"ಅರಣ್ಯ ಭವನ",
18ನೇ ಅಡ್ಡ ರಸ್ತೆ, ಮಲ್ಲೇಶ್ವರಂ,
**ಬೆ ೦ ಗ ಳೂ ರು–3.**

ಮಾನ್ಯರೇ,

ವಿಷಯ: Diversion of 177.091 hectare of forest land in Devalli, Payaswadi, Atle and 21 other villages in Dharwad, Haliyal, Dandeli Wildlife (Kali Tiger Reserve) and Belagavi Division(s) for laying of Goa-Tamnar 4000 KV D/C Wuad Transmission Line (LILO Project) in favour of Manager, Goa-Tamnar Transmission Project Limited, FI Mira Corporate Suite, Main Mathura Road, Ishwar Nagar, New Delhi.

ಉಲ್ಲೇಖ:1) ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ವಿಭಾಗ, ಬೆಳಗಾವಿ ಇವರ ಪತ್ರ ಸಂಖ್ಯೆ: ಡಿ1/ಭೂಮಿ/ಟ್ರಾನ್ಸ್‌ಮಿಷನ್–ಲೈನ್/ಸಿಆರ್–/2018–19/2973 ದಿ: 20–11–2020.
2) ಈ ಕಛೇರಿ ಸಮಸಂಖ್ಯೆ ಪತ್ರ ದಿನಾಂಕ: 08–12–2020.
3) ತಮ್ಮ ಪತ್ರ ಸಂಖ್ಯೆ: KFD/HOFF/A52K(GEL)/15 2018-FC ದಿನಾಂಕ:11–05–2022.
4) ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ವಿಭಾಗ, ಬೆಳಗಾವಿ ಇವರ ಪತ್ರ ಸಂಖ್ಯೆ: ಡಿ1/ಭೂಮಿ/ಟ್ರಾನ್ಸ್‌ಮಿಷನ್–ಲೈನ್/ಸಿಆರ್–/2022–23 ದಿನಾಂಕ: 07–10–2022.

** * **

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (3) ರ ಪತ್ರಕ್ಕನುಸಾರ, ಉಲ್ಲೇಖ (4) ರಡಿ ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ವಿಭಾಗ, ಬೆಳಗಾವಿ ಇವರು ಈ ಕಛೇರಿಗೆ ವರದಿ ಸಲ್ಲಿಸಿ, ಸದರಿ ವರದಿಯಲ್ಲಿ ಲೋಂಡಾ ವಲಯ ವ್ಯಾಪ್ತಿ ಕಾಪೋಲಿ ಘೋಸೆ, ಅಕ್ರಾಳಿ ಹಾಗೂ ವರ್ಕಡಪಾಟೆ ಅರಣ್ಯ ಪ್ರದೇಶಗಳಲ್ಲಿ ಆನೆ ಕಾರಿಡಾರ್ ಇದ್ದು, ಗೋಲಿಹಳ್ಳಿ ವಲಯ ವ್ಯಾಪ್ತಿಯ ಗಸ್ತೋಳಿ, ಸೋನೆನಟ್ಟಿ (ಭೂರಣಕಿ) ಹಾಗೂ ದೇಗಾಂವ ಅರಣ್ಯ ಪ್ರದೇಶಗಳಲ್ಲಿ ಆನೆ ಕಾರಿಡಾರ್ ಇರುವುದರಿಂದ ಆನೆಗಳ ಚಲನವಲನಗಳಿಗೆ ಧಕ್ಕೆಯಾಗುತ್ತದೆ ಎಂದು ಈ ಹಿಂದೆ ಸದರಿ ಪ್ರಸ್ತಾನೆಯನ್ನು ತಿರಸ್ಕರಿಸಲು ಶಿಫಾರಸ್ಸು ಮಾಡಿ ಉಲ್ಲೇಖ (1) ರ ಪ್ರಕಾರ ವರದಿ ಸಲ್ಲಿಸಲಾಗಿದೆ ಎಂದು ನಮೂದಿಸಿರುತ್ತಾರೆ.

ಮುಂದುವರೆದು, ಉಪಯೋಗಿ ಸಂಸ್ಥೆಯವರು ಬೆಳಗಾವಿ ವಿಭಾಗ ಕಛೇರಿಗೆ ದಿನಾಂಕ: 26–07–2022 ರನ್ವಯ ಮನವಿ ಸಲ್ಲಿಸಿ, ಈ ಹಿಂದೆ ಸಲ್ಲಿಸಿರುವ ಪ್ರಸ್ತಾವನೆಯಲ್ಲಿ ಕೇವಲ ದಾಂಡೇಲಿ ವನ್ಯಜೀವಿ ವಿಭಾಗಕ್ಕೆ ಸಂಬಂಧಿಸಿದಂತೆ, ಮಾನ್ಯ ಸರ್ವೋಚ್ಛ ನ್ಯಾಯಾಲಯದ ಆದೇಶದ ಪ್ರಕಾರ ಪರಿಷ್ಕತ ಪ್ರಸ್ತಾವನೆ ಸಲ್ಲಿಸಬೇಕಾಗಿದ್ದು, ಬೆಳಗಾವಿ ವಿಭಾಗಕ್ಕೆ ಸಂಬಂಧಿಸಿದಂತೆ, ಈ ಹಿಂದೆ ಸಲ್ಲಿಸಿದ ಪ್ರಸ್ತಾವನೆಯಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ ಹಾಗೂ ಈ ಕೆಳಗಿನಂತೆ ಕೇಂದ್ರ ಸರ್ಕಾರದ ಪರಿಸರ, ಅರಣ್ಯ ಹಾಗೂ ಹವಾಮಾನ ಬದಲಾವಣೆ ಮಂತ್ರಾಲಯ, (ಅರಣ್ಯ ಸಂರಕ್ಷಣೆ ವಿಭಾಗ) ರವರ ಪತ್ರ ದಿನಾಂಕ: 19–11–2014 ರ ಮಾರ್ಗಸೂಚಿ ಪ್ರಕಾರ ಪರಿಷ್ಕತ ಪ್ರಸ್ತಾವನೆ ಸಲ್ಲಿಸಲು ಪತ್ರ ಬರೆಯಲಾಗಿರುತ್ತದೆ ಎಂದು ವರದಿ ಸಲ್ಲಿಸಿರುತ್ತಾರೆ.

In case of transmission lines passing through National Parks. Wildlife Sanctuaries and Wildlife Corridors, insulated conductors shall only be used to prevent electrocution of animals shall be read as "in case of transmission line passing through elephant reserves/corridors. Additional clearances of at least 6m shall be provided over and above minimum clearance as stipulated under Central Electricity Authority (Measures relating to safety and Electricity Supply) Regulations, 2010 above the ground from the lowest conductor of the transmission lines".

ಅದರಂತೆ, ಉಪಯೋಗಿ ಸಂಸ್ಥೆಯವರು ದಿನಾಂಕ: 20-09-2022 ರನ್ವಯ ಕೇಂದ್ರ ಸರ್ಕಾರದ ಪತ್ರ ದಿನಾಂಕ: 19-11-2014 ರಡಿಯಲ್ಲಿ ಸೂಚಿಸಿರುವ ಮಾರ್ಗಸೂಚಿ ಪ್ರಕಾರ ಆನೆ ಚಲನವಲನ ಪ್ರದೇಶಗಳಲ್ಲಿ ಅವುಗಳ ಸಂರಕ್ಷಣೆಗೆ (Elephant Carridor Area) ಅಗತ್ಯ ಮುಂಜಾಗ್ರತ ಕ್ರಮ ಕೈಗೊಳ್ಳಲಾಗುವುದೆಂದು ಮುಚ್ಚಳಿಕೆ ಪತ್ರ (Undertaking) ವನ್ನು ಸಲ್ಲಿಸಿರುತ್ತಾರೆ ಎಂದು ವರದಿಸುತ್ತಾ, ಬೆಳಗಾವಿ ಪ್ರಾದೇಶಿಕ ವಿಭಾಗಕ್ಕೆ ಸಂಬಂಧಿಸಿದಂತೆ, ಉಪಯೋಗಿ ಸಂಸ್ಥೆಯವರು ಈ ಹಿಂದೆ Online ನಲ್ಲಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಗಣಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ವಿಭಾಗ, ಬೆಳಗಾವಿ ಇವರು ಉಲ್ಲೇಖ (4) ರಡಿ ಕೋರಿಕೊಂಡಿರುತ್ತಾರೆ.

ಕಾರಣ, ಮೇಲೆ ವಿವರಿಸಿದಂತೆ, ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ವಿಭಾಗ, ಬೆಳಗಾವಿ ಇವರು ವರದಿ ಮೇರೆಗೆ, ಉಪಯೋಗಿ ಸಂಸ್ಥೆಯವರು ಈ ಹಿಂದೆ Online ನಲ್ಲಿ ಸಲ್ಲಿಸಿದ ಪ್ರಸ್ತಾವನೆಯನ್ನು ಪರಿಗಣಿಸಲು ಉಲ್ಲೇಖ (4) ರ ಪತ್ರದ ಪ್ರತಿಯನ್ನು ಹಾಗೂ ಅಡಕಗಳನ್ನು ಈ ಪತ್ರದ ಲಗತ್ತಿಟ್ಟು ತಮ್ಮಲ್ಲಿ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಗೌರವಪೂರ್ವಕವಾಗಿ ಸಲ್ಲಿಸಲಾಗಿದೆ.

ತಮ್ಮ ವಿಶ್ವಾಸಿ,

Digitally Signed by
Manjunath R Chavan
Date: 19-10-2022 17:01:32
Reason: Approved

ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ,
ಬೆಳಗಾವಿ ವೃತ್ತ, ಬೆಳಗಾವಿ

ಪ್ರತಿಯನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿ, ಬೆಳಗಾವಿ ವಿಭಾಗ, ಬೆಳಗಾವಿ ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.